# ಇ.ಎಸ್.ಐ.ಸಿ. ಯ “ಅಟಲ್ ಬೀಮಿತ್ ವ್ಯಕ್ತಿ ಕಲ್ಯಾಣ ಯೋಜನೆಯ (ಎಬಿವಿಕೆವೈ) ಒಂದು ಪರಿಚಯ



**ಕೆಲಸಗಾರರ ಘನತೆ ಕಾಪಾಡುವುದು**
**ಅವರ ಹಣಕಾಸು ಸುರಕ್ಷತೆಯನ್ನು ಖಾತ್ರಿಗೊಳಿಸುವುದು**


सत्यमेव जयते

ಕಾನೂನು ಮತ್ತು ಉದ್ಯೋಗ ಸಚಿವಾಲಯ
ಭಾರತ ಸರಕಾರ

ಉದ್ಯೋಗಿಗಳ ರಾಜ್ಯ ವಿಮಾ ನಿಗಮ

**ಅಟಲ್ ಬೀಮಿತ್ ವ್ಯಕ್ತಿ ಕಲ್ಯಾಣ ಯೋಜನೆ (ಎಬಿವಿಕೆವೈ):** ಇ.ಎಸ್.ಐ. ಕಾಯ್ದೆ 1948ರ ಪರಿಚ್ಛೇದ 2 (9)ರ ಅಡಿಯಲ್ಲಿ ಬರುವ ಕಾರ್ಮಿಕರ ಕಲ್ಯಾಣಕ್ಕಾಗಿ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ **90 ದಿನಗಳ ವರೆಗೆ** ಪರಿಹಾರ ಪಾವತಿಯ ರೂಪದಲ್ಲಿ ನೀಡಲಾಗುವ ಈ ಯೋಜನೆಯನ್ನು ಇ.ಎಸ್.ಐ.ಸಿ. ನಿರ್ವಹಿಸುತ್ತಿದೆ. ಈ ಯೋಜನೆಯನ್ನು ಆರಂಭದಲ್ಲಿ ಪ್ರಾಯೋಗಿಕವಾಗಿ 2 ವರ್ಷಗಳ ಅವಧಿಗೆ ಅಂದರೆ 01.07.2018 ರಿಂದ ಜಾರಿಗೆ ಬರುವಂತೆ ಪರಿಚಯಿಸಲಾಯಿತು. ಈ ಯೋಜನೆಯನ್ನು ಈಗ ಇನ್ನೊಂದು ವರ್ಷಕ್ಕೆ ಅಂದರೆ 01.07.2020 ರಿಂದ 30.06.2021ರ ವರೆಗೆ ವಿಸ್ತರಿಸಲಾಗಿದೆ. ಅರ್ಹತೆಯ ಷರತ್ತುಗಳನ್ನು ಸಡಿಲಿಸುವುದರ ಜೊತೆಗೆ ಈ ಯೋಜನೆಯಡಿ ನಿರುದ್ಯೋಗ ಪರಿಹಾರವನ್ನು ಹಿಂದಿನ ವೇತನದ ದರವಾದ ಶೇ.25 ರಿಂದ ಶೇ.50ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ವಿಮಾಕೃತ ವ್ಯಕ್ತಿಯು ಅವನ/ಅವಳ ನಿರುದ್ಯೋಗಕ್ಕೆ ಮುಂಚಿತವಾಗಿ ಕನಿಷ್ಠ 2 ವರ್ಷ ವಿಮಾಕೃತ ಉದ್ಯೋಗದಲ್ಲಿರಬೇಕು ಮತ್ತು ನಿರುದ್ಯೋಗಕ್ಕೆ ಮುಂಚಿನ ವಂತಿಗೆ ಅವಧಿಯಲ್ಲಿ ಕನಿಷ್ಠ 78 ದಿನಗಳ ವಂತಿಗೆ ಪಾವತಿಸಿರಬೇಕು ಹಾಗೂ ಉಳಿದ ಹಿಂದಿನ 3 ವಂತಿಗೆ ಅವದಿಗಳಲ್ಲಿ ಕನಿಷ್ಠ ಒಂದು ವಂತಿಗೆ ಅವಧಿಯಲ್ಲಿ 78 ದಿನಗಳ ವಂತಿಗೆ ಪಾವತಿಸಿರಬೇಕು.

ಗಮನಾರ್ಹ ಸಡಿಲಿಕೆಯ ಪ್ರಕಾರ, ಪರಿಹಾರದ ಪಾವತಿಯನ್ನು ನಿರುದ್ಯೋಗದ 30 ದಿನಗಳ ನಂತರ ಮಾಡಬಹುದಾಗಿದೆ ಮತ್ತು ಕಾರ್ಮಿಕರು ಕ್ಲೇಮ್ ಅನ್ನು ನೇರವಾಗಿ ಸಂಬಂಧಪಟ್ಟ ಇ.ಎಸ್.ಐ.ಸಿ. ಶಾಖಾ ಕಛೇರಿಗೆ ಸಲ್ಲಿಸಬಹುದಾಗಿದೆ. ವರ್ಧಿತ ಲಾಭ ಮತ್ತು ಷರತ್ತುಗಳ ಸಡಿಲಿಕೆಯು 24ನೇ ಮಾರ್ಚ್, 2020 ರಿಂದ 31ನೇ ಡಿಸೆಂಬರ್, 2020ರ ವರೆಗೆ ಅನ್ವಯವಾಗುತ್ತದೆ. ಪರಿಹಾರ ಪಡೆಯಲು ಕ್ಲೇಮ್‌ಗಳನ್ನು www.esic.in ವೆಬ್‌ಸೈಟ್ ಆನ್‌ಲೈನ್ ಮೂಲಕ ಸಲ್ಲಿಸಬೇಕು ಮತ್ತು ಅದರ ಹಾರ್ಡ್ ಕಾಪಿಯ ಜೊತೆಗೆ ಅಫಿಡೆವಿಟ್, ಆಧಾರ್ ಕಾರ್ಡಿನ ನಕಲು ಪ್ರತಿ ಮತ್ತು ಬ್ಯಾಂಕ್ ಖಾತೆಯ ವಿವರಗಳನ್ನು ಸಂಬಂಧಪಟ್ಟ ಇ.ಎಸ್.ಐ.ಸಿ. ಶಾಖಾ ಕಛೇರಿಗೆ ಅಂಚೆ ಮೂಲಕ ಅಥವಾ ವ್ಯಯಕ್ತಿಕವಾಗಿ ಸಲ್ಲಿಸಬೇಕು. ಕ್ಲೇಮ್ ಪರಿಶೀಲನೆ ಹಾಗೂ ವಿಮಾಕೃತ ವ್ಯಕ್ತಿಯ (ಐ.ಪಿ.) ಬ್ಯಾಂಕ್ ಖಾತೆಗೆ ಪರಿಹಾರದ ಪಾವತಿಯ ಸಂಪೂರ್ಣ ಪ್ರಕ್ರಿಯೆಯನ್ನು 15 ದಿನಗಳ ಅವಧಿಯಲ್ಲಿ ಪೂರ್ಣಗೊಳಿಸಲಾಗುತ್ತದೆ.

## ಅಟಲ್ ಬೀಮಿತ್ ವ್ಯಕ್ತಿ ಕಲ್ಯಾಣ್ ಯೋಜನಾ ಅಡಿಯಲ್ಲಿ

**ಈಗ ಕೆಲಸಗಾರರಿಗೆ ಪರಿಹಾರ ಮೊತ್ತ ದ್ವಿಗುಣಗೊಳಿಸಲಾಗಿದೆ**

**ಕೆಲಸಗಾರರ ಬ್ಯಾಂಕ್ ಖಾತೆಗೆ ನೇರ ಜಮಾ**

**ಅರ್ಹತೆಯ ಮಾನದಂಡದಲ್ಲಿ ರಿಲಾಕ್ಸೇಶನ್**

**ಕೆಲಸಗಾರರು www.esic.in ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಬಹುದು**

# "ಆಗಾಗ್ಗೆ ಕೇಳಲಾಗುವ ಪ್ರಶ್ನೆಗಳು" ಹಾಗೂ "ಅಟಲ್ ಬೀಮಿತ್ ವ್ಯಕ್ತಿ ಕಲ್ಯಾಣ ಯೋಜನೆಯ (ಎಬಿವಿಕೆವೈ)" ಕುರಿತು ಉತ್ತರಗಳು

| ಅ. ಸಂ. | ಪ್ರಶ್ನೆ | ಉತ್ತರ |
|---|---|---|
| 1 | ಲಾಕ್‌ಡೌನ್ ಅವಧಿಯಲ್ಲಿ ಉದ್ಯೋಗದಾತರಿಂದ ಸಂಬಳವನ್ನು ಪಡೆಯದ ಹಾಗೂ ವಂತಿಗೆಯನ್ನು "0" (ಶೂನ್ಯ) ಎಂದು ತೋರಿಸಲಾದ ವಿಮಾಕೃತ ವ್ಯಕ್ತಿಗಳು (ಐ.ಪಿ.) ನಿರುದ್ಯೋಗದ ಪರಿಮಿತಿಯಲ್ಲಿ ಬರುತ್ತಾರೆಯೇ?<br><br>ಉದ್ಯೋಗದಾತರು ಇ.ಎಸ್.ಐ.ಸಿ. ಚಲನ್ ಪಟ್ಟಿಯಿಂದ ವಿಮಾಕೃತ ವ್ಯಕ್ತಿಗಳ ಹೆಸರುಗಳನ್ನು ತೆಗೆದುಹಾಕುವುದು ಕಡ್ಡಾಯವೇ? ಏಕೆಂದರೆ, ಹೆಚ್ಚಿನ ಸಂದರ್ಭಗಳಲ್ಲಿ ಕಾರ್ಮಿಕರ ವಂತಿಗೆ "0" (ಶೂನ್ಯ) ಮತ್ತು ಇನ್ನೂ ಅನರ್ಹ ಎಂದು ತೋರಿಸುತ್ತದೆ. | ಇಲ್ಲ.<br><br>ಈ ಯೋಜನೆಯಡಿ ಪರಿಹಾರವು ನಿರುದ್ಯೋಗಿಗ 'ಳಾಗಿರುವ ವಿಮಾದಾರರಿಗೆ ಮಾತ್ರ ಲಭ್ಯವಿದೆ. ಮಾಸಿಕ ವಂತಿಗೆ ಚಲನ್‌ನಲ್ಲಿ ಉದ್ಯೋಗದಾತರು ವಿಮಾಕೃತ ವ್ಯಕ್ತಿ ಹೊರಬಂದಿರುವುದನ್ನು (ಜಘಣ) ತೋರಿಸಿದರೆ ಮಾತ್ರ ಅವರನ್ನು ನಿರುದ್ಯೋಗಿ ಎಂದು ಪರಿಗಣಿಸಲಾಗುತ್ತದೆ. ಮಾಸಿಕ ವಂತಿಗೆ ಚಲನ್‌ನಲ್ಲಿ ಉದ್ಯೋಗದಾತ ವಿಮಾಕೃತ ವ್ಯಕ್ತಿಗೆ "0" ವಂತಿಗೆ ತೋರಿಸಿದ್ದರೆ, ವಿಮಾಕೃತ ವ್ಯಕ್ತಿ ಇನ್ನೂ ಉದ್ಯೋಗ ನೀಡಿದ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದಾನೆ ಎಂದರ್ಥ ಮತ್ತು ಉದ್ಯೋಗದಾತ, ಕಾರ್ಮಿಕರಿಗೆ ಸ್ವಲ್ಪ ಮೊತ್ತವನ್ನು ಪಾವತಿಸಬಹ ುದಾದ್ದರಿಂದ ಅಂತಹ ಕಾರ್ಮಿಕರು ಯೋಜನೆಯಡಿ ಪರಿಹಾರ ಪಡೆಯಲು ಅರ್ಹರಲ್ಲ. |
| 2 | ಲಾಕ್‌ಡೌನ್ ಸಮಯದಲ್ಲಿ ನಿರುದ್ಯೋಗಿಗಳಾಗಿದ್ದು, ಈಗ ಕಾರ್ಯನಿರ್ವಹಿಸುತ್ತಿರುವ ವಿಮಾದಾರರು ಈ ಯೋಜನೆಯ ವ್ಯಾಪ್ತಿಯಡಿ ಬರುತ್ತಾರೆಯೇ? | ಅಂತಹ ಕಾರ್ಮಿಕರು ಅಗತ್ಯವಾದ ಅರ್ಹತಾ ಷರತ್ತುಗಳನ್ನು ಪೂರೈಸಿದರೆ ಯೋಜನೆಯಡಿಯಲ್ಲಿ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಕ್ಲೇಮ್ ಮಾಡಿರುವ ವ್ಯಕ್ತಿ ಕ್ಲೇಮ್ ಪಡೆಯುವ ಅವಧಿಯಲ್ಲಿ ನಿರುದ್ಯೋಗಿ ಆಗಿರಬೇಕು. |
| 3 | ನಿರುದ್ಯೋಗದ ನಂತರ ಮೊದಲ 30 ದಿನಗಳ ವರೆಗೆ ವಿಮಾಕೃತ ವ್ಯಕ್ತಿಯು ಯೋಜನೆಯ ಅಡಿಯಲ್ಲಿ ಪರಿಹಾರಕ್ಕಾಗಿ ಕ್ಲೇಮ್ ಸಲ್ಲಿಸಲು ಸಾಧ್ಯವಿಲ್ಲ. | ಕ್ಲೇಮ್ ಮಾಡಿದ ವ್ಯಕ್ತಿಯ ನಿರುದ್ಯೋಗಿ ಎಂದು ನಿರೂಪಿಸಲ್ಪಟ್ಟ 30 ದಿನಗಳ ನಂತರ ಪರಿಹಾರಕ್ಕಾಗಿ ಕ್ಲೇಮ್ ಸಲ್ಲಿಸಬಹುದು. ಅಂದರೆ ಉದ್ಯೋಗದಾತ "ಹೊರಬಂದಿದ್ದಾರೆ" (exit) ಎಂದು ತೋರಿಸಬೇಕು. ಕ್ಲೇಮ್ ಮಾಡಿದ ವ್ಯಕ್ತಿಯು ತನ್ನ ನಿರುದ್ಯೋಗದ ನಂತರ ಪೂರ್ಣಗೊಂಡ ತಿಂಗಳಿಗಾಗಿ ಕ್ಲೇಮ್ ಸಲ್ಲಿಸಬಹುದು. |
| 4 | ಸಿಸ್ಟಂ ಮೂಲಕ ಸಲ್ಲಿಸಿದ ಕ್ಲೇಮ್ ಯೋಜನೆಯಡಿ ಪರಿಹಾರದ ಪಾವತಿಗೆ ಖಾತರಿ ನೀಡುತ್ತದೆಯೇ? ಕ್ಲೇಮ್ ಮಾಡುವುದಕ್ಕೆ ಸಿಸ್ಟಂ ಅವಕಾಶ ನೀಡಿದ ನಂತರವೂ ಕ್ಲೇಮ್ ಅನ್ನು ತಿರಸ್ಕರಿಸುವ ಸಾಧ್ಯತೆಗಳಿವೆಯೆ? | ಯೋಜನೆಯ ಅಡಿಯಲ್ಲಿ ಪರಿಹಾರವನ್ನು ಪಾವತಿಸುವುದಕ್ಕೆ ಸಿಸ್ಟಂ ನಲ್ಲಿ ಸಲ್ಲಿಸಿದ ಕ್ಲೇಮ್ ಖಾತರಿ ನೀಡುವುದಿಲ್ಲ. ಇಂತಹ ಪ್ರಕರಣಗಳು ವಿರಳ, ಆದರೂ ಶಾಖಾ ಕಛೇರಿಯ ಮ್ಯಾನೇಜರ್ ಕ್ಲೇಮ್ ಪರಿಶೀಲನೆಯ ಸಮಯದಲ್ಲಿ ಉದ್ಯೋಗದಾತನ ದಾಖಲೆಗಳ ಪ್ರಕಾರ ಕ್ಲೇಮ್ ಮಾಡಿದ ವ್ಯಕ್ತಿಯು ಅನರ್ಹ ಎಂದು ಕಂಡುಬಂದಲ್ಲಿ ಕ್ಲೇಮ್ ಅನ್ನು ತಿರಸ್ಕರಿಸಬಹುದು. |

| ಅ. ಸಂ. | ಪ್ರಶ್ನೆ | ಉತ್ತರ |
|---|---|---|
| 5 | ಸೇವಾ ನಿವೃತ್ತಿ (Superannuation) ವಯಸ್ಸು ಎಷ್ಟು? | ಯಾವುದೇ ವಿಮಾಕೃತ ವ್ಯಕ್ತಿಯ ಸೇವಾ ನಿವೃತ್ತಿ ವಯಸ್ಸು ಕಾನೂನಿನ ಅನುಸಾರ ಕಂಪನಿಯ ನೀತಿಯ ಮೇಲೆ ಅವಲಂಬಿತವಾಗಿರುತ್ತದೆ. ಇ.ಎಸ್.ಐ. ಕಾಯ್ದೆಯ ಪರಿಚ್ಛೇದ 56ರ ಪ್ರಕಾರ ಸೇವಾ ನಿವೃತ್ತಿ ವಯಸ್ಸನ್ನು 60 ವರ್ಷ ಎಂದು ಪರಿಗಣಿಸಬಹುದು. |
| 6 | ಉದ್ಯೋಗವನ್ನು ತೊರೆಯಲು ಕಾರ್ಮಿಕರು ಕಂಪನಿಗೆ ತಮ್ಮ ರಾಜೀನಾಮೆಯನ್ನು ನೀಡುವುದು ಸಾಮಾನ್ಯ ವಿದ್ಯಮಾನವಾಗಿದೆ. ಕೆಲಸಕ್ಕೆ ರಾಜೀನಾಮೆ ಸಲ್ಲಿಸಿದ ಕಾರ್ಮಿಕರು ಎಬಿವಿಕೆವೈ ಅಡಿಯಲ್ಲಿ ಪರಿಹಾರ ಪಡೆಯಲು ಅರ್ಹರಾಗುತ್ತಾರೆಯೇ? | ರಾಜೀನಾಮೆ ಸಲ್ಲಿಸಿದ ಕಾರ್ಮಿಕರನ್ನು ನಿರುದ್ಯೋಗಿಗಳೆಂದು ಪರಿಗಣಿಸಲಾಗುತ್ತದೆ ಮತ್ತು ಅರ್ಹತೆ ಹೊಂದಿದ್ದರೆ, ರಾಜೀನಾಮೆ ನೀಡುವ ಸಮಯದಲ್ಲಿ/ಉದ್ಯೋಗವನ್ನು ತೊರೆಯುವ ಸಮಯದಲ್ಲಿ ಉದ್ಯೋಗದಾತ ಅವರಿಗೆ ಯಾವುದೇ ರಿಟ್ರೆಂಚ್‌ಮೆಂಟ್ ಬೆನಿಫಿಟ್/ಆರ್ಥಿಕ ಪರಿಹಾರವನ್ನು ಪಾವತಿಸಿದೇ ಇದ್ದಲ್ಲಿ ಈ ಯೋಜನೆ ಅಡಿ ಅವರಿಗೆ ಪರಿಹಾರವನ್ನು ನೀಡಬಹುದು. |
| 7 | ಕಾರ್ಮಿಕರಿಗೆ ಎಬಿವಿಕೆವೈ ಅಡಿಯಲ್ಲಿ ಪರಿಹಾರವನ್ನು ಪಾವತಿಸಲು ಲಾಕ್‌ಡೌನ್ (ಸರ್ಕಾರದ ಆದೇಶದ ಮೇರೆಗೆ ಉದ್ಯೋಗದಾತ ತಾತ್ಕಾಲಿಕವಾಗಿ ಸಂಸ್ಥೆಯನ್ನು ಮುಚ್ಚುವುದು) ಅರ್ಹತಾ ಅಂಶ ಆಗಬಹುದೇ? | ಇಲ್ಲ. ಲಾಕ್-ಔಟ್/ಲಾಕ್‌ಡೌನ್ ಅವಧಿಯಲ್ಲಿ ಸಂಸ್ಥೆಯನ್ನು ಮುಚ್ಚಿದ್ದರೂ ಕೂಡ ಉದ್ಯೋಗದಾತ ಉದ್ಯೋಗಿಗಳನ್ನು ಮುಂದುವರಿಸುವುದರಿಂದ ಲಾಕ್-ಡೌನ್ ಅಥವಾ ಲಾಕ್-ಔಟ್ ಸಂದರ್ಭದಲ್ಲಿ ಎಬಿವಿಕೆವೈ ಅಡಿಯಲ್ಲಿ ಪರಿಹಾರವನ್ನು ಪಡೆಯುವುದಕ್ಕೆ ಅರ್ಹತೆ ಇರುವುದಿಲ್ಲ. |
| 8 | ಕ್ಲೇಮ್ ಪರಿಶೀಲನೆಯ ಸಮಯದಲ್ಲಿ ಶಾಖೆಯ ಮ್ಯಾನೇಜರ್ ಕಾರ್ಮಿಕರನ್ನು ಅವರ ನಿರುದ್ಯೋಗದ ಬಗ್ಗೆ ವಿಚಾರಿಸಬೇಕೇ ಮತ್ತು ಅವರ ನಿರುದ್ಯೋಗದ ಬಗ್ಗೆ ಯಾವುದೇ ಘೋಷಣಾ ಪತ್ರವನ್ನು ತೆಗೆದುಕೊಳ್ಳಬೇಕೇ? | ಕಾರ್ಮಿಕರಿಂದ (ನಿರುದ್ಯೋಗಿಯಾದ ಮಾಜಿ ವಿಮಾಕೃತ ವ್ಯಕ್ತಿ) ಯಾವುದೇ ಘೋಷಣಾ ಪತ್ರವನ್ನು ಪಡೆಯಬೇಕಾಗಿಲ್ಲ. ಕಾರ್ಮಿಕರ ವಿಚಾರಣೆಯನ್ನು ಕೂಡ ಮಾಡಬೇಕಾಗಿಲ್ಲ. ಕಾರ್ಮಿಕರಿಗೆ ಸಂಬಂಧಪಟ್ಟ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಉದ್ಯೋಗದಾತರಿಂದ ಪಡೆಯಬಹುದು. |
| 9 | ಪರಿಶೀಲನೆಯ ಸಮಯದಲ್ಲಿ ಉದ್ಯೋಗದಾತರು ಕಾರ್ಮಿಕ ಉದ್ಯೋಗ ತೊರೆದಿದ್ದಾನೆ ಅಥವಾ ರಾಜೀನಾಮೆ ನೀಡಿದ್ದಾನೆ ಅಥವಾ ಸ್ವಯಂಪ್ರೇರಿತ ನಿವೃತ್ತಿ ಹೊಂದಿದ್ದಾನೆ ಎಂದು ತೋರಿಸುತ್ತಿದ್ದಾರೆ. | ಅಂತಹ ಕಾರ್ಮಿಕರನ್ನು ನಿರುದ್ಯೋಗಿಗಳೆಂದು ಪರಿಗಣಿಸಬಹುದು ಮತ್ತು ಅರ್ಹತೆ ಇದ್ದರೆ, ಅವರು ರಾಜೀನಾಮೆ ನೀಡುವ/ಉದ್ಯೋಗವನ್ನು ತೊರೆಯುವ ಸಮಯದಲ್ಲಿ ಉದ್ಯೋಗದಾತರು ಯಾವುದೇ ರಿಟ್ರೆಂಚ್‌ಮೆಂಟ್ ಬೆನಿಫಿಟ್/ಆರ್ಥಿಕ ಪರಿಹಾರವನ್ನು ಪಾವತಿಸಿಲ್ಲ ಎಂದಾಗಿದ್ದಲ್ಲಿ, ಈ ಯೋಜನೆಯಡಿ ಅವರಿಗೆ ಪರಿಹಾರವನ್ನು ನೀಡಬಹುದು. |
| 10 | ನಿರುದ್ಯೋಗಿಯಾಗಿರುವ ಕಾರ್ಮಿಕರಿಗೆ ಇ.ಪಿ.ಎಫ್. ವಂತಿಗೆಯನ್ನು ಪಾವತಿಸಿದ್ದರೆ ಅವರನ್ನು ನಿರುದ್ಯೋಗಿ ಎಂದು ಪರಿಗಣಿಸಬೇಕೇ? | ಇಲ್ಲ.<br>ಪರಿಶೀಲನೆಯ ಸಮಯದಲ್ಲಿ ಕಾರ್ಮಿಕರಿಗೆ ಇ.ಪಿ.ಎಫ್. ಅನ್ನು ಪಾವತಿಸಲಾಗಿದೆ ಎಂದು ಕಂಡುಬಂದಲ್ಲಿ ಅಂತಹ ಕಾರ್ಮಿಕರನ್ನು ನಿರುದ್ಯೋಗಿಗಳೆಂದು ಪರಿಗಣಿಸಲಾಗುವುದಿಲ್ಲ. |

**ಹೆಚ್ಚಿನ ಮಾಹಿತಿಗಾಗಿ, ಇಎಸ್‌ಐಸಿ ಶಾಖೆ ಅಥವಾ ಟೋಲ್‌ಫ್ರೀ ಸಂಖ್ಯೆ 1800 11 2526 ಯನ್ನು ಸಂಪರ್ಕಿಸಿ**